# ಅನುಪಮ ಅನುಭಾವಿ ಅಲ್ಲಮಪ್ರಭು

ಕೆ.ಬಿ. ಪ್ರಭುಪ್ರಸಾದ್

೧೨ನೆಯ ಶತಮಾನದ ಕಾಲ. ಜಗತ್ತು ಹಿಂದೆಂದೂ ಕಂಡರಿಯದ ಹೊಸಬಗೆಯ ಬಹುಮುಖೀ ಕ್ರಾಂತಿಯೊಂದು ಕನ್ನಡನೆಲದಲ್ಲಿ ನಡೆಯಿತು. ಭಕ್ತಿಭಂಡಾರಿ ಬಸವಣ್ಣ ಅದರ ನೇತಾರ. ಆತನ ಸಮಕಾಲೀನ ಶಿವಶರಣರಲ್ಲಿ ಅಲ್ಲಮಪ್ರಭು ಮೇರುಸದೃಶನಾದ ಮಹಾಶರಣ, ಗುರು. ವಿಶಿಷ್ಟ ಅನುಭಾವಿ. ಜಗತ್ತಿನ ಶ್ರೇಷ್ಠ ಜ್ಞಾನಿಗಳಲ್ಲಿ, ಚಿಂತಕರಲ್ಲಿ ಮತ್ತು ಅನುಭಾವಿಗಳಲ್ಲಿ ಅಗ್ರಗಣ್ಯ.

ಆತನ ಜೀವನ ಕಥೆಯನ್ನು ತಿಳಿಯಲಾಶಿಸುವವವರು ಹರಿಹರನ ಪ್ರಭುದೇವರ ರಗಳೆ, ಚಾಮರಸನ ಪ್ರಭುಲಿಂಗಲೀಲೆ, ಯಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಪರ್ವತೇಶನ ಪ್ರಭುದೇವರ ಸಾಂಗತ್ಯ ಮುಂತಾದ ಕೃತಿಗಳನ್ನು ಓದಬಹುದು. ಅಲ್ಲಮನ ಬದುಕಿನ ಯಾವ ವೃತ್ತಾಂತಕ್ಕೂ ಐತಿಹಾಸಿಕ ಆಧಾರಗಳಿಲ್ಲ. ಅವನ ವಚನಗಳಲ್ಲಿ ಅಭಿವ್ಯಕ್ತವಾಗುವ ವ್ಯಕ್ತಿತ್ವವನ್ನು ಪರಿಭಾವಿಸಿ, ಜನಜನಿತವಾದ ಸಂಗತಿಗಳ ಮೇಲೆ ಈ ಕಾವ್ಯಗಳನ್ನು ರಚಿಸಿದ್ದಾರೆ.

ಅನುಭಾವಿ ಅಲ್ಲಮನ ವ್ಯಕ್ತಿತ್ವ ಮಾತುಗಳಿಗೆ ಸಿಕ್ಕುವುದಿರಲಿ, ಭಾವದ ಹಿಡಿತಕ್ಕೂ ಸಿಕ್ಕುವಂತಹುದಲ್ಲ. ಕಲ್ಪನೆ, ಅನುಭವಗಳಿಗೆ ಸಿಕ್ಕರೂ ಸಿಕ್ಕದಂತಹ ಅಸೀಮ, ಅದ್ಭುತ ವ್ಯಕ್ತಿತ್ವ ಅವನ ವಚನಗಳಲ್ಲಿ ವ್ಯಕ್ತವಾಗುವ ಚಿಂತನ-ವಿಚಾರಧಾರೆ ಸಹ ಸುಲಭ ಗ್ರಾಹ್ಯವಲ್ಲ. ಅದು ಅತ್ಯುನ್ನತ ಸ್ತರದ್ದು. ಸರಳವೂ ಅಲ್ಲ, ಕ್ಲಿಷ್ಟವೂ ಅಲ್ಲ ಎಂಬಂತಹವು. ಅಮೂರ್ತವಾಗಿ, ಬೆಡಗಾಗಿ, ಅನ್ಯಾದೃಶ ಪ್ರತಿಮೆಗಳಾಗಿ ನಿಲ್ಲುತ್ತವೆ. ಒಗಟು, ಬೆಡಗು, ಪ್ರತಿಮೆ – ಈ ರೂಪಗಳೊಳಗೆ ಕೆನೆಗಟ್ಟಿರುವ ಆತನ ಅನುಭಾವದ ಅಮೃತದ ರುಚಿ ಮನದಲ್ಲಿ ಉಳಿಯುತ್ತದೆ. ವಿವರಿಸಹೋಗದೆ ಪರಿಭಾವಿಸಿದಷ್ಟೂ ಹೊಸ ಹೊಸ ಅರ್ಥದ ಪದರಗಳು ತೆರೆದುಕೊಳ್ಳುತ್ತ, ಆನಂದವನ್ನುಂಟುಮಾಡುತ್ತವೆ. ಇಂತಹ ಅನುಭಾವಿಯನ್ನು ಆಧ್ಯಾತ್ಮಿಕ ನೆಲೆಯಲ್ಲಿ ಅವಲೋಕಿಸುವ, ಪರಿಭಾವಿಸುವ, ನಮ್ರ ಪ್ರಯತ್ನವೇ ಈ ಲೇಖನ.

ಅಲ್ಲಮ ಆಧ್ಯಾತ್ಮಿಕ ಜೀವನಕ್ಕೆ ಏಕೆ ಮತ್ತು ಹೇಗೆ ಕಾಲಿರಿಸಿದ, ಯಾವ ವಯಸ್ಸಿನಲ್ಲಿ ಆತನ ಅಧ್ಯಾತ್ಮಸಾಧನೆ ಆರಂಭವಾಯಿತು ಎಂಬುದು ಖಚಿತವಾಗಿ ತಿಳಿದಿಲ್ಲ. ಕವಿ ಹರಿಹರ ಹೇಳುವಂತೆ ತಾರುಣ್ಯದಲ್ಲೇ ಜೀವನದ ದೊಡ್ಡ ತಿರುವು ಎಂಬಂತಹ, ಕಾಮಲತೆಯ ಪ್ರಸಂಗದಿಂದುಂಟಾದ ಮಾನಸಿಕ ಆಘಾತವೋ, ತೀವ್ರವಾದ ದುಃಖವೋ, ಅಲ್ಲದೆ ಕವಿ ಚಾಮರಸ ಹೇಳುವಂತೆ ಹುಟ್ಟಿನಿಂದಲೆ ಸಹಜವಾಗಿ ಇದ್ದ ವಿರಕ್ತ ಮನೋಧರ್ಮವೋ, ಕಾರಣವಾಗಿ ಅಲ್ಲಮ ಅಧ್ಯಾತ್ಮಪಥಗಾಮಿಯಾದ. ಅನಿರೀಕ್ಷಿತವಾಗಿ ಅನಿಮಿಷ ಗುರುವಿನ ದರ್ಶನ ದೊರೆತು, ಅವರ ಕೃಪಾದೃಷ್ಟಿಮಾತ್ರದಿಂದ, ಸ್ವಸ್ವರೂಪದ ಅರಿವಾಗಿ ಅದರ ಆನಂದಾನುಭವವನ್ನು ಸ್ಥಿರಗೊಳಿಸಿಕೊಳ್ಳಲು ಸಾಧನೆಗೆ ತೊಡಗಿರಬೇಕು. ಇದು ಏನೇ ಇರಲಿ, ಸಾಧನೆಯ ಏರುಪಥದ ಕ್ರಮವಾದ ಹಂತಗಳಲ್ಲಿನ ಭಾವ ಅನುಭಾವ, ಬೆಳವಣಿಗೆಗಳು ಬಸವ ವಚನಗಳಲ್ಲಿ ಕಾಣುವಂತೆ ಅಲ್ಲಮನ ವಚನಗಳಲ್ಲಿ ಕ್ರಮವಾಗಿ ಕಾಣುವುದಿಲ್ಲ ಎಂಬ ಮಾತಿದೆ. ಇದು ಪೂರ್ಣ ಸತ್ಯವಲ್ಲ. ಈಗ ದೊರೆತಿರುವ ಅಲ್ಲಮನ ವಚನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಸಾಧನಾಪಥದಲ್ಲಿ ತಾನು ಅನುಸರಿಸಿದ ವಿಧಾನಗಳನ್ನೂ ಆಯಾ ಹಂತಗಳಲ್ಲಾದ ಅನುಭವಗಳನ್ನೂ ಅವನು ವ್ಯಕ್ತಮಾಡಿರುವುದು ಕಂಡುಬರುತ್ತದೆ. ಸಿಕ್ಕದಿರುವ ಇನ್ನೂ ಎಷ್ಟೋ ವಚನಗಳಲ್ಲಿ ಇಂತಹ ಕೊಂಡಿಗಳು ಕಳೆದು ಹೋಗಿದ್ದರೆ ಆಶ್ಚರ್ಯವಿಲ್ಲ.



ಮಾನ್ಯ ಲೇಖಕರು ನಿವೃತ್ತ ಕಾಲೇಜು ಪ್ರಾಂಶುಪಾಲರು. ಹಲವಾರು ಪತ್ರಿಕೆಗಳಲ್ಲಿ ಇವರ ಲೇಖನಗಳು ನಿಯಮಿತವಾಗಿ ಪ್ರಕಟವಾಗುತ್ತಿವೆ. ಇವರು ಹಲವಾರು ಸಂಘಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ; ರಾಮಕೃಷ್ಣ ಆಶ್ರಮದ ಭಕ್ತರು.

ಮೊದಮೊದಲು ಮಾಯೆ ಕವಿದು ಮರೆವು ಆವರಿಸಿದರೂ ಕ್ಷಣಿಕವೂ, ನಶ್ವರವೂ ಆದ ಬದುಕಿನ ತೀವ್ರ ಅನುಭವವಾಗಿ, ಮುಂದೆ ದಾರಿ ಕಾಣದ ಕತ್ತಲೆಯ ಘಟ್ಟ ಕಳೆದು, ಆಕಸ್ಮಿಕವಾಗಿ ದೊರೆತ ಅನಿಮಿಷ ಗುರುದರ್ಶನದಿಂದ ಧಿಗ್ಗನೆ ಬೆಳಕು ಮೂಡಿದಂತಾಯಿತು. ಅವನ ಒಳಮನದ ಹಂಬಲ ಹುಡುಕಾಟ ಇಂತಹ ಗುರುವಿಗಾಗಿಯೆ ಇದ್ದಿರಬಹುದು.

ಅರಸುವ ಬಳ್ಳಿ ಕಾಲ ಸುತ್ತಿತೆಂಬಂತೆ
ಬಯಸುವ ಬಯಕೆ ಕೈಸಾರಿದಂತೆ.....
ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ...
ಎನ್ನ ಒಳ ಹೊರಗೆ ಎಡೆದೆರಹಿಲ್ಲದೆ
ಥಳಥಳಿಸಿ ಬೆಳಗಿನ ಹೊಳೆವುತಿದ್ದ
ಅಖಂಡ ಜ್ಯೋತಿಯ ಕಂಡೆ ನೋಡಾ
ಎನ್ನ ಪರಮ ಗುರುವ ಕಂಡು
ಬದುಕಿದೆನು ಕಾಣಾ ಗುಹೇಶ್ವರಾ (ವ–೮೨೧)

ನೆಲದಡಿಯ ಗುಹೆಯಲ್ಲಿ(ತನ್ನೆದೆಯ ಗುಹೆಯಲ್ಲೂ) ಬೆಳಗತೊಡಗಿದೆ, 'ಅಖಂಡಜ್ಯೋತಿ'ಯೇ ತನ್ನ ಗುರು, ದೈವ, ಪರಮಸತ್ಯ ಎಂದು ಅರಿವಾದಾಗ, ಅವನು ಆ ಗುಹೇಶ್ವರನನ್ನೇ ತನ್ನೆಲ್ಲ ವಚನಗಳ ಅಂಕಿತವನ್ನಾಗಿ ಮಾಡಿಕೊಂಡ.

ಕಾಣಬಾರದ ಗುರು ಕಣ್ಗೆ ಗೋಚರವಾದಡೆ
ಹೇಳಲಿಲ್ಲದ ಬಿನ್ನಪ
ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗ
ಪೂಸಲಿಲ್ಲದ ವಿಭೂತಿಯ ಪಟ್ಟೆ, ಹೇಳಲಿಲ್ಲದ ಮಂತ್ರ
ತುಂಬಿ ತುಳುಕುವ ಕಲಶಾಭಿಷೇಕ
ಆಗಮವಿಲ್ಲದ ದೀಕ್ಷೆ, ಪೂಜೆಗೆ ಬಾರದ ಲಿಂಗ
ಸಂಗವಿಲ್ಲದ ಸಂಬಂಧ, ಸ್ವಯವಪ್ಪ ಅನುಗ್ರಹ
ಆನುಗೊಂಬಂತೆ ಮಾಡಾ ಗುಹೇಶ್ವರಾ (ವ–೧೦೭೬)

ಹೀಗೆ ಗುರುಕರುಣೆ ಅನಿಮಿತ್ತವಾಗಿ ಹರಿದುಬಂದುದು: 'ಪುಣ್ಯವುಳ್ಳ ಕಾಲಕ್ಕೆ ಮಣ್ಣು ಹೊನ್ನಪ್ಪುದು' ಎನ್ನುವಂತಾಯಿತು.

ಅಲ್ಲಮನಿಗೆ,

ಮಣ್ಣಮರೆಯ ದೇಗುಲದೊಳಗೊಂದು ಮಾಣಿಕ್ಯವ
ಕಂಡ ಬಳಿಕ ಇನ್ನು ಮುನ್ನಿನಂತಪ್ಪುದೆ ಗುಹೇಶ್ವರ
(ವ–೧೩೫೬)

ಎಂದು ಮನಸ್ಸು ನಿರಾಳವಾಯಿತು.

ಹೃದಯ ಕಮಲ ಮಧ್ಯದಲ್ಲಿ ಗುರುವನರಿದು ಪೂಜಿಸಿ
ಗುರು ವಿಖ್ಯಾತನೆಂಬುದ ನಾನರಿದೆನಯ್ಯಾ
ಗುಹೇಶ್ವರ ಲಿಂಗದಲ್ಲಿ ಹಿಂದಣ ಹುಟ್ಟರತು
ಹೋದುದ ಕಂಡೆನಯ್ಯಾ (ವ–೫೬)

ತನ್ನ ತಪಶ್ಶಕ್ತಿಯನ್ನೆಲ್ಲ ಸದ್ಗುರು, ಅಲ್ಲಮನಿಗೆ ಧಾರೆಯೆರೆದ ಮೇಲೆ, ಹಿಂದಣ ಬದುಕಿನ ಬವಣೆ ನೀಗಿ ಮರು ಹುಟ್ಟು ಪಡೆದಂತಾಯಿತು. ಅಂಗೈ ಮೇಲೆ ಇಷ್ಟಲಿಂಗ, ಅದನಿತ್ತ ಗುರು, ಅಂತರಂಗದಲ್ಲಿ ಅನಾವರಣಗೊಂಡ ಭಾವಲಿಂಗ – ಪರತತ್ತ್ವ ಈ ಎಲ್ಲವೂ ಒಂದೇ ಎಂಬ ಅನುಭವವಾಯಿತು. ಮುಂದಿನ ದಾರಿ, ಜೀವಿತೋದ್ದೇಶ ನಿಚ್ಚಳವಾದುವು. ಈ ಕ್ಷಣದ ದಿವ್ಯಾನುಭವವನ್ನು ಸ್ಥಿರಗೊಳಿಸಿಕೊಳ್ಳುವ ಸಾಧನೆ ಮೊದಲಾಯಿತು.

ಈ ತಿರುವಿಗೆ ಮುನ್ನ ಸಂಸಾರ(ಭವ) ಬಂಧನದಲ್ಲಿ ಪಟ್ಟ ಪಾಡು, ಮನದೊಳಗಣ ತುಮುಲ–ಹಂಬಲ ನೆನಪಾದಾಗ,

ಅಳಿವರ ಉಳಿವರ ಸುಳಿವರ ನಿಲವ ನೋಡಿ
ಕಂಡು ಸೋಂಕಿಲ್ಲದ ನಿಜವ ಬಯಸುತಿದ್ದೆ

ಭವದಲ್ಲಿ ಸಿಲುಕಿ ಒದ್ದಾಡುತ್ತಿರುವವರ ನೆನಪಾಗುತ್ತದೆ–

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರಾ ನಿಮಗಾಗಿ ಸತ್ತವರಾರನೂ ಕಾಣೆ (ವ–೯೧)

ಹೊನ್ನು–ಹೆಣ್ಣು–ಮಣ್ಣುಗಳು ಮಾಯೆಯೆಂದು ದೂರುವುದೇಕೆ?

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ
(ವ –೨)

ಆದ್ದರಿಂದ ಆಸೆಯನ್ನು ಅಂಕೆಯಲ್ಲಿಡುವುದೇ ಸಾಧನೆಯ ಮೊದಲ ಹೆಜ್ಜೆ. ನಂತರ ಭಕ್ತಿ.

ಭಕ್ತಿ ಉಂಟಾಗುವುದು ಹೇಗೆ?

ದೇಹಭಾವವಳಿಯದೆ ಜೀವಭಾವವಳಿಯದು
ಜೀವ ಭಾವವಳಿದಲ್ಲದೆ ಭಕ್ತಿ ಭಾವವಳವಡದು
ಭಕ್ತಿ ಭಾವವಳವಟ್ಟಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು
ಕುರುಹು ನಷ್ಟವಾದಲ್ಲದೆ ಮಾಯೆ ಓಂಗದು
ಕಾಯದ ಜೀವದ ಹೊಲಿಗೆಯ ಅಳಿವ ಭೇದವ ತಿಳಿಯಬಲ್ಲಡೆ
ಗುಹೇಶ್ವರಲಿಂಗದ ಅರಿವು ಸಾಧ್ಯವಪ್ಪುದು (ವ–೧೨೭೦)

(ಮುಂದುವರಿಯುವುದು)

(ಮೇಲಿನ ವಚನಗಳ ಆಧಾರ ಗ್ರಂಥ : **ಅಲ್ಲಮಪ್ರಭುದೇವರ ವಚನಸಂಪುಟ, ಸಮಗ್ರ ವಚನ ಸಂಪುಟ, ಸಂಪುಟ – ೨;**
**ಪ್ರಕಾಶಕರು:** ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)